**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

Form No.4(Civil)
(R.P.No.57)

ಎಸ್ .ಸಿ. ನಂಃ **18/2017**

ಪಿ.ಡಬ್ಲ್ಯೂ ನಂಃ **08**
ಸಿ.ಡಬ್ಲ್ಯೂ ನಂಃ **15**
ಸಾಕ್ಷಿಯನ್ನು ದಿನಾಂಕಃ **24-03-2026**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಂಗಮೇಶ |
| ತಂದೆಯ ಹೆಸರು | ಃ | ವೀರಣ್ಣ ಶಿವಯೋಗಿ |
| ವಯಸ್ಸು | ಃ | **44** ವರ್ಷ |
| ಉದ್ಯೋಗ | ಃ | ಅಂಡರ ಪೋಸ್ಟಿಂಗ್ ಕರ್ನಾಟಕ ಲೋಕಾಯುಕ್ತ |
| ವಾಸ ಸ್ಥಳ | ಃ | ಗದಗ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ದಿಃ **24-7-2015** ರಿಂದ **13-10-2016** ರ ವರೆಗೆ ನಾನು ಹನುಮಸಾಗರ ಪೊಲೀಸ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕೆಲಸ ಮಾಡಿದ್ದೇನೆ.

**2).** ದಿಃ **8-8-2016** ರಂದು ಚಾಸಾ **1** ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನಾ ಸಂಃ **65/2016** ರಂತೆ ಪ್ರ ವ ವರದಿಯನ್ನು ದಾಖಲು ಮಾಡಿಕೊಂಡೆ. ಸದರಿ ಪ್ರ ವ ವರದಿಯನ್ನು ಸಿಬ್ಬಂದಿರವರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಅದರ ಪ್ರತಿಯನ್ನು ಮೇಲಾಧಿಕಾರಿಗಳಿಗೆ ನೀಡಿರುತ್ತೇನೆ. ನಾನು ಸ್ವೀಕರಿಸಿದ ದೂರು ನಿಪಿ **1** ರಂತೆ ಇದ್ದು, ಸಾಕ್ಷಿದಾರರ ಸಹಿಯನ್ನು ನಿಪಿ **1**(ಬಿ) ಎಂದು ಗುರುತಿಸಲಾಯಿತು. ಪ್ರ ವ ವರದಿಯನ್ನು ನಿಪಿ **7** ಎಂದು ಗುರುತಿಸಲಾಯಿತು. ನಂತರ ಚಾಸಾ**1** ರವರ ಹೇಳಿಕೆಯನ್ನು ಪಡೆದುಕೊಂಡು ಉಪಚಾರ ಕುರಿತು ಸಿಬ್ಬಂದಿ ಮೂಲಕ ಆಸ್ಪತ್ರೆಗೆ ಕಳುಹಿಸಿಕೊಟ್ಟೆ.

**3).** ದಿಃ **9-8-2016** ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ **1**

ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ನಿಪಿ **3** ಪಂಚನಾಮೆಯನ್ನು ಬೆಳಗ್ಗೆ **9-45** ರಿಂದ **11-20** ರ ವರೆಗೆ ಬರೆದೆ. ಆ ಕಾಲಕ್ಕೆ ಸ್ಥಳದಲ್ಲಿದ್ದ **2** ಬಾಗಿಲು ಪಟ್ಟಿ ರೀಪುಗಳು, ಹಾಗೂ ಪ್ಲೈ ವುಡ್ಡಿನ **2** ಸಣ್ಣ ತುಕಡಿಗಳು, ಹಿಡಿಗಾತ್ರದ ಕಟ್ಟಿಗೆಯ ಕಾವುಳ್ಳ ಕೊಡ್ಲಿ, ಒಟ್ಟು **6** ವಸ್ತುಗಳನ್ನು ಅಮಾನತ್ತುಪಡಿಸಿಕೊಂಡೆ. ಅವುಗಳು ಈಗ ನೋಡಿದ ಮುದ್ದೆಮಾಲು-**1** ರಿಂದ **6** ಆಗಿರುತ್ತವೆ. ಸದರಿ ಪಂಚನಾಮೆಯಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ **3**(ಬಿ) ಎಂದು ಗುರುತಿಸಲಾಯಿತು. ಆ ಸಮಯ ನಿಪಿ **2** ಫೋಟೋವನ್ನು ತೆಗೆಯಲಾಯಿತು.

**4**). ಪ್ರಕರಣದ ಸಾಕ್ಷಿದಾರರಾದ ಚಾಸಾ **4** ರಿಂದ **9** ರವರನ್ನು ವಿಚಾರಿಸಿ ಹೇಳಿಕೆಗಳನ್ನು ಪಡೆದುಕೊಂಡೆ. ಚಾಸಾ **6** ಮತ್ತು **8** ಕ್ರಮವಾಗಿ ನಿಪಿ **4** ಮತ್ತು **5** ರಂತೆ ಹೇಳಿಕೆಗಳನ್ನು ಕೊಟ್ಟಿರುತ್ತಾರೆ.

**5**). ದಿಃ **15-8-2016** ರಂದು ಪ್ರಕರಣದ ಸಾಕ್ಷಿದಾರರಾದ ಚಾಸಾ **10** ರಿಂದ **12** ರವರ ಹೇಳಿಕೆಗಳನ್ನು ಪಡೆದುಕೊಂಡೆ.

**6**). ದಿಃ **21-8-2016** ರಂದು ಸಿಬ್ಬಂದಿ ನಿಪಿ **6** ಗಾಯದ ಪ್ರಮಾಣಪತ್ರವನ್ನು ತಂದು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆ. ಸದರಿ ದಾಖಲೆಯಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ **6**(ಬಿ) ಎಂದು ಗುರುತಿಸಲಾಯಿತು.

**7**). ದಿಃ **2-10-2016** ರಂದು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಯಿತು.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ ಕೆ ಡಿ ವಕೀಲರಿಂದ

**8).** ದೂರು ಕೊಡಲು ಚಾಸಾ **1** ಒಬ್ಬರೇ ಠಾಣೆಗೆ ಬಂದಿದ್ದರು. ತಮ್ಮ ದೇಹದ ಮೇಲೆ ಗಾಯ ಆಗಿದೆ ಎಂದು ನಿಪಿ **1** ರಲ್ಲಿ ಎಲ್ಲಿಯೂ ಕಾಣಿಸಿರುವುದಿಲ್ಲ. ಯಾವುದೇ ಗಾಯ ಕಂಡುಬರದೇ ಇದ್ದರೂ ಆಕೆಯನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಿಕೊಡಲಾಗಿತ್ತು. ಪಂಚರಿಗೆ ಲಿಖಿತವಾಗಿ ನೋಟೀಸು ಕೊಟ್ಟಿಲ್ಲ. ನಿಪಿ **3** ಪಂಚನಾಮೆ ಕೈ ಬರವಣಿಗೆ ನಮ್ಮ ಸಿಬ್ಬಂದಿಯದ್ದಾಗಿರುತ್ತದೆ. ಆದರೆ ಅವರ ದಸ್ಕೂರು ಸಹಿಯನ್ನು ಸದರಿ ಪಂಚನಾಮೆಯಲ್ಲಿ ಪಡೆದಿಲ್ಲ. ನಿಪಿ **3** ಪಂಚನಾಮೆಯಲ್ಲಿ ಚಾಸಾ **1** ರವರ ಸಹಿ ಪಡೆದಿಲ್ಲ.

**9).** ಗುನ್ನಾ ಜಾಗಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ **2** ಫೋಟೋಗೆ ಸಂಬಂಧಪಟ್ಟಂತೆ ಭಾರತ ಸಾಕ್ಷ್ಯ ಅಧಿನಿಯಮ ಕಲಂ **65**(ಬಿ) ಅಡಿ ಪ್ರಮಾಣಪತ್ರ ಸಲ್ಲಿಸಿರುವುದಿಲ್ಲ. ಮುದ್ದೆಮಾಲು-**1** ರಿಂದ **6** ಇವುಗಳನ್ನು ನಾನು ಅಮಾನತ್ತುಪಡಿಸಿಕೊಂಡಿಲ್ಲ ಹಾಗೂ ಈ ಪ್ರಕರಣಕ್ಕೆ ಬೇಕಾದಂತೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರನ್ನು ವಿಚಾರಿಸಿ ಹೇಳಿಕೆ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ **1** ರವರಿಗೆ ಯಾವುದೇ ಗಾಯ ಆಗದೇ ಇದ್ದರೂ ನಿಪಿ **6** ಗಾಯದ ಪ್ರಮಾಣಪತ್ರವನ್ನು ಪ್ರಭಾವ ಬೀರಿ ಪಡೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ.

**10).** ಚಾಸಾ **1** ರವರ ತಂದೆ ಹಾಗೂ ಅವರ ಸಹೋದರರು ಮತ್ತು ಆರೋಪಿಗಳ ಮಧ್ಯ ಕ್ರಿಮಿನಲ್ ಪ್ರಕರಣಗಳು ದಾಖಲಾದ ವಿಚಾರ ನನಗೆ ಗೊತ್ತಿಲ್ಲ. ಗುನ್ನಾ ಸಂಃ **44/2012** ರಲ್ಲಿ **1** ನೇ ಆರೋಪಿ ಈರಪ್ಪ ದೂರುದಾರರಾಗಿದ್ದು ಚಾಸಾ **1** ಮತ್ತು ಅವರ ಕುಟುಂಬದವರ ವಿರುದ್ಧ ದೂರು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಘಟನೆಯಲ್ಲಿ **2** ನೇ ಆರೋಪಿಯ ಕಾಲು ಮುರಿತದ ಗಾಯ ಆಗಿದ್ದು, **1** ನೇ ಆರೋಪಿಗೂ ಸಹಾ ಗಾಯವಾಗಿದ್ದು ಆ ಪ್ರಕರಣವನ್ನು ರಾಜೀ ಮಾಡಿಕೊಳ್ಳದೇ ಇದ್ದ ಕಾರಣ ನಮ್ಮ ಮೇಲೆ ಪ್ರಭಾವ ಬೀರಿ ದೂರುದಾರರು ಮತ್ತು ಅವರ ಕುಟುಂಬದವರು ಆರೋಪಿಗಳ ವಿರುದ್ಧ ಈ ಕೇಸು ದಾಖಲು ಮಾಡಿಸಿದ್ದರು ಎಂದರೆ ಸರಿಯಲ್ಲ. ಚಾಸಾ **1** ರವರ ಸಹೋದರ ಪೊಲೀಸ

ಪೇದೆಯಾಗಿದ್ದು ಆತನ ಪ್ರಭಾವದಿಂದ ಈ ಸುಳ್ಳು ಪ್ರಕರಣವನ್ನು ಆರೋಪಿಗಳ ವಿರುದ್ಧ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

# IN THE COURT OF PRL. DISTRICT & SESSIONS JUDGE

Form No.4(Civil)
Deposition Sheets

# KOPPAL.

**SC No: 18/2017**

PW-07
CW-13
Duly sworn on **24-03-2026**

| | | |
|---|---|---|
| **Name of the Witness** | : | Dr. Virupakshappa Allalli |
| **Father's Name** | : | Gangappa |
| **Age** | : | 55 years |
| **Occupation.** | : | Medical Officer, CHC Mangaluru. |
| **Residence** | : | Mangaluru, Tq-Kukanur, Dist-Koppal. |

**Examination in chief on oath by: Public Prosecutor**

I was working as Medical Officer at Taluka Government Hospital, Kushtagi from 2016 till 2021.

2). On 09-08-2016 at about 1-36 a.m injured Smt. Basavannemma W/o Irappa Javali came to our hospital for treatment with history of assault.

On examination, the following injuries were found on her body.

Abrasion present over left elbow posterior measures about 4 x 3 x 1/8$^{th}$ cm in diameter.

No evidence of fracture or dislocation of underlying joint bones.

I am of the opinion that the above said injury is simple in nature can be caused during assault.

To that effect I had issued wound certificate on 21-08-2016. The said wound certificate is the document which I see now. The

same is marked as Ex.P-6 and signature of the witness Ex.P-6(a).

**Cross examination on behalf of accused :**

3). The MLC was sent to the Jurisdictional police but I unable to give the reference number. There was a mob accompanying the injured but I do not remember properly. The identification marks of the injured is not mentioned in Ex.P-6. The exact time when the patient arrived to the hospital and the time at which I gave treatment are also not mentioned in Ex.P-6. The age of the wound is also not mentioned. I agree to the suggestion that injury mentioned in Ex.P-6 can be caused due to fall. It is not correct to suggest that I had not examined the injured and have issued wound certificate at the instance of police.

[Typed to my dictation in open Court]

R.O.I. & A.C.

(Chandrasekhar C)
Prl. District & Sessions Judge,
Koppal